ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

20ನೇ ಫೆಬ್ರವರಿ, 2014

**ಮಾನ್ಯಶ್ರೀ ಜಾರ್ಜ್ ರವರೇ,**

ಇದೇ ಜನವರಿ 07, 2014ರಂದು ಬೆಂಗಳೂರಿನ ಪ್ರೀಸ್ಕೂಲ್ ಒಂದರಲ್ಲಿ ಕಲಿಯುತ್ತಿದ್ದ ಎರಡುವರೆ ವರ್ಷದ ಪುಟ್ಟಬಾಲಕಿಯ ಮೇಲೆ ಆಕೆಯ ಶಾಲಾವಾಹನದ ಚಾಲಕ, ಶಾಲೆ ಆವರಣದಲ್ಲಿಯೇ ನಡೆಸಿದನೆನ್ನಲಾದ ಅತ್ಯಂತ ಘೋರ ಲೈಂಗಿಕ ಅಪರಾಧದ ಹಿನ್ನಲೆಯಲ್ಲಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಆ ಚಾಲಕನನ್ನು ಪೊಲೀಸರು ಬಂಧಿಸಿದ್ದಾರಾದರೂ, ಈ ಹೇಯ ಪ್ರಕರಣದಿಂದ ಮನನೊಂದು, ಅತ್ಯಂತ ಕಳಕಳಿಯಿಂದ ಈ ವಿಷಯಗಳನ್ನು ತಮ್ಮಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಆ ಪುಟ್ಟಮಗುವನ್ನು ಮತ್ತು ಆಕೆಯ ಪೋಷಕರನ್ನು ಘೋರವಾಗಿ ಆಘಾತಗೊಳಿಸಿರುವ ಈ ಘಟನೆಯು ಶಾಲಾವಾಹನಗಳಲ್ಲಿ ಮತ್ತು ಶಾಲೆಯ ಆವರಣಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಅನೇಕ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪ್ರಕರಣದಲ್ಲಿ ದಾಖಲಾಗಿರುವಂತೆ, ಈ ಹೀನಾಯಕೃತ್ಯವನ್ನು ಶಾಲಾ ಆವರಣದೊಳಗೆ ನಡೆಸಲಾಗಿದ್ದು ಆ ಸಂದರ್ಭದಲ್ಲಿ ಒಬ್ಬ ಮಹಿಳೆಯು ಕೂಡ ಸಹಕರಿಸಿದ್ದಳೆಂದು ಆರೋಪಿಸಲಾಗಿದೆ. ಆದರೆ, ಶಾಲಾ ಆಡಳಿತದ ವಿರುದ್ಧವಾಗಲಿ, ಮಹಿಳಾ ಸಹಾಯಕಿಯ ವಿರುದ್ಧವಾಗಲಿ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

ಬಾಲಕಿಯ ಪೋಷಕರಿಗೆ ಪ್ರಕರಣದ ತನಿಖಾ ವಿಧಾನದ ಮೇಲೆಯೇ ತೀವ್ರ ಅಸಮಾಧಾನಗಳಿವೆ. ಅಪರಾಧ ನಡೆದ ವಾಹನವನ್ನು ಬಿಡುಗಡೆಗೊಳಿಸಿಕೊಂಡಿರುವ ಶಾಲಾ ಆಡಳಿತ ಮಂಡಳಿಯ ಕ್ರಮದ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರ್ ಆಕ್ಷೇಪಿಸಿಲ್ಲ! ಘಟನೆ ನಡೆದು 45 ದಿನಗಳ ಮೇಲಾದರೂ ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲ ಅಥವಾ ಶಾಲಾ ಸಿಬ್ಬಂದಿಯ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ.

ಇಂತಹ ಘೋರ ಅಮಾನವೀಯ ಅಪರಾಧ ಕೃತ್ಯ ನಡೆದಿರುವ ಹಿನ್ನಲೆಯಲ್ಲಿ ಬಾಧಿತರಿಗೆ ನ್ಯಾಯವನ್ನೊದಗಿಸಲು, ಈಗಲಾದರೂ ತಾವು ಕೂಡಲೇ ಈ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ :

...2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते



1. ಪಬ್ಲಿಕ್ ಪ್ರಾಸಿಕ್ಯೂಟರ್ ಆ ಶಾಲಾವಾಹನ ಬಿಡುಗಡೆಗೆ ಆಕ್ಷೇಪಿಸಬೇಕು ಮತ್ತು ಅದನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಶಾಲಾ ಆವರಣದೊಳಗೆ ಅಪರಾಧ ಕೃತ್ಯ ಸಂಭವಿಸಿರುವುದರಿಂದ ಶಾಲಾ ವ್ಯವಸ್ಥಾಪಕರ ನಿರ್ಲಕ್ಷ್ಯವೂ ಘಟನೆಗೆ ಕಾರಣವಾಗಿದೆ. ಆದ್ದರಿಂದ, ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಇತರ ಬೋಧನಾ ಸಿಬ್ಬಂದಿಗಳ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕು.

2. ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಪೋಸ್ಕೊ ಕಾಯ್ದೆಯ ಅನ್ವಯ ಇಂತಹ ಪ್ರಕರಣಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇನ್ನೂ ಅಂತಹ ನ್ಯಾಯಾಲಯಗಳು ಸ್ಥಾಪನೆಯಾಗಿಲ್ಲ. ಆದ್ದರಿಂದ ಪ್ರಕರಣದ ಇತ್ಯರ್ಥಕ್ಕಾಗಿ ತ್ವರಿತ ವಿಶೇಷ ನ್ಯಾಯಾಲಯದ ಸ್ಥಾಪನೆಯನ್ನು ತಕ್ಷಣ ಅಂಗೀಕರಿಸಬೇಕು.

3. ಆರೋಪಿಯು ಈ ಹಿಂದೆಯೂ ಇಂತಹ ಕೃತ್ಯಗಳನ್ನು ಎಸಗಿರುವ ಸರಣಿ ಅಪರಾಧಿಯೆಂದು ಹೇಳಲಾಗುತ್ತಿರುವುದರಿಂದ ಶಾಲೆಯ ಇತರ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಪರೀಕ್ಷಿಸಬೇಕಲ್ಲದೆ ತನಿಖೆ ಪೂರ್ಣವಾಗುವವರೆಗೆ ಶಾಲೆಯನ್ನು ಮುಚ್ಚಬೇಕು.

4. ಶಾಲೆಗಳಲ್ಲಿ ಚಾಲಕರು, ಭದ್ರತಾ ಸಿಬ್ಬಂದಿ ಮತ್ತು ಇತರೆ ಕೆಲಸದವರನ್ನು ನೇಮಕ ಮಾಡಿಕೊಳ್ಳುವಾಗ ಸಮಗ್ರವಾದ ಮತ್ತು ಕಠಿಣವಾದ ಪರಿಶೀಲನಾ ಪ್ರಕ್ರಿಯೆಗಳನ್ನು ಅನುಸರಿಸುವುದನ್ನು ಖಚಿತಪಡಿಸಲು ಸರ್ಕಾರ ಕೂಡಲೆ ನಿಯಮಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಶಾಲೆಗಳಲ್ಲಿನ ಈಗಿನ ನೇಮಕಾತಿ ಪ್ರಕ್ರಿಯೆಗಳನ್ನು ಕೂಲಂಕುಶವಾಗಿ ತನಿಖೆ ಮಾಡುವುದರ ಜೊತೆಗೆ ಅಯೋಗ್ಯರನ್ನು ಗುರುತಿಸಿ ಕ್ರಮಕ್ಕೈಗೊಳ್ಳಬೇಕು. ಇಂತಹ ವಿಚಾರಣೆಯಿಂದ ಪ್ರಾಯೋಗಿಕವಾದ ಸೂಕ್ತ ಸಾಂಸ್ಥಿಕ ವಿಧಾನಗಳು ರೂಪುಗೊಳ್ಳುವುದಲ್ಲದೆ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಬದ್ಧವಾಗಿರಲು ಶಾಲೆಗಳಿಗೆ ಮಾರ್ಗಸೂಚಿಯೂ ಆಗುತ್ತದೆ.

…3..

सत्यमेव जयते



ಬಹಳ ಮುಖ್ಯವಾಗಿ ಇಂತಹ ಹೀನವಾದ ಅಪರಾದ ಪ್ರಕರಣಗಳಲ್ಲಿ, ಅಪರಾಧಿಗಳಿಗೆ ಪರಿಣಾಮಕಾರಿ ಶಿಕ್ಷೆಯಾಗುವುದು ಕೂಡ ಅತ್ಯಂತ ಮಹತ್ವಪೂರ್ಣವಾಗಿದೆ. ಆದ್ದರಿಂದ, ಬಾರ್ ಕೌನ್ಸಿಲ್ ನ ಅಪರಾಧ ವಿಭಾಗದಿಂದ ಯಾರಾದರೂ ಸೂಕ್ತ ಅನುಭವವುಳ್ಳ ವಕೀಲರನ್ನು, ಈ ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಬೇಕೆಂದು ಒತ್ತಾಯಿಸುತ್ತೇನೆ. ಫಿರ್ಯಾದುದಾರರ ಪರ ವಕೀಲರು ಸಮರ್ಥವಾಗಿ ವಾದಮಂಡಿಸದಿದ್ದಲ್ಲಿ, ಇಂತಹ ಅಮಾನವೀಯ ಅಪರಾಧಕ್ಕಾಗಿ, ಸಂತ್ರಸ್ತ ಬಾಲಕಿ ಮತ್ತು ಆಕೆಯ ಪೋಷಕರ ಜೀವನಪರ್ಯಂತದ ಆಘಾತಕ್ಕಾಗಿ, ಅಪರಾಧಿಗೆ ಸೂಕ್ತ ಶಿಕ್ಷೆಯಾಗುವುದಿಲ್ಲ. ಅಷ್ಟೇ ಅಲ್ಲದೆ, ಪ್ರಕರಣವನ್ನು ಗಮನಿಸುತ್ತಿರುವ ಸಾಮಾನ್ಯ ಜನರಿಗೆ ರಾಜ್ಯದ ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆಯೇ ಇಲ್ಲವಾಗುವ ಅಪಾಯವಿದೆ.

ಈ ವಿಷಯದಲ್ಲಿ ತಾವು ಕೂಡಲೇ ಗಮನಹರಿಸಿ ತುರ್ತಾಗಿ ಕ್ರಮಕೈಗೊಳ್ಳುವುದರ ಜೊತೆಗೆ ನಮ್ಮ ನಗರ ಮತ್ತು ರಾಜ್ಯವು ನಮ್ಮ ಮಕ್ಕಳಿಗೆ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವಿರೆಂದು ನಿರೀಕ್ಷಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಕೆ ಜೆ ಜಾರ್ಜ್**
ಮಾನ್ಯ ಗೃಹ ಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

**ಪ್ರತಿ:-**
ಪೋಲಿಸ್ ಕಮೀಷನರ್, ಬೆಂಗಳೂರು ನಗರ, ಬೆಂಗಳೂರು.